**ಓ.ಎಸ್. ನಂ.153/2021**
**ಡಿ.ಡಬ್ಲ್ಯೂ: 1**

**ದಿನಾಂಕಃ 16-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಬಿ ಡಿ ಎ ವಕೀಲರಿಂದಃ**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೆ ನಂಬರ 70 ನೇದ್ದಕ್ಕೆ ಸಂಬಂದಿಸಿದ 5 ಕೈಬರಹ ಪಹಣಿಗಳ ದೃಡಿಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ, ಅವುಗಳನ್ನು ಒಟ್ಟಾಗಿ ನಿಡಿ-1 ಎಂದು ಗುರುತಿಸಲಾಯಿತು. ಸರ್ವೆ ನಂಬರ 223/1/3 ನೇದ್ದಕ್ಕೆ ಸಂಬಂದಿಸಿದ ಒಂದು ಗಣಕೀಕೃತ ಪಹಣಿಯನ್ನು ಹಾಜರುಪಡಿಸುತ್ತೇನೆ, ಅದನ್ನು ನಿಡಿ-2 ಎಂದು, ಸರ್ವೆ ನಂ.70 ನೇದ್ದಕ್ಕೆ ಸಂಬಂದಿಸಿದ 2025-2026 ರ ಪಹಣಿಯನ್ನು ಹಾಜರುಪಡಿಸುತ್ತೇನೆ, ಅದನ್ನು ನಿಡಿ-3 ಎಂದು, ಎಮ್ ಆರ್ ನಂ. 27/2003-2004 ನೇದ್ದನ್ನು ಹಾಜರುಪಡಿಸುತ್ತೇನೆ, ಅದನ್ನು ನಿಡಿ-4 ಎಂದು, ಸರ್ವೆ ನಂ.167/1, ಸರ್ವೆ ನಂ.146/3, ಸರ್ವೆ ನಂ.166/1, ಸರ್ವೆ ನಂ.170/2 ಮತ್ತು ಸರ್ವೆ ನಂ. 166/16 ಗೆ ಸಂಬಂದಿಸಿದ ಪಹಣಿಗಳನ್ನು ಹಾಜರುಪಡಿಸುತ್ತೇನೆ ಅವುಗಳನ್ನು ಅನುಕ್ರಮವಾಗಿ ನಿಡಿ-5 ರಿಂದ 9 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿ ನಂ.1-37/1 ನೇದ್ದಕ್ಕೆ ಸಂಬಂದಿಸಿದ ಈ ಸ್ವತ್ತನ್ನು ಹಾಜರುಪಡಿಸುತ್ತೇನೆ, ಅದನ್ನು ನಿಡಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಕುಮಾರಿ ವಿ ಬಿ ಕೆ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.